# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 104 | Pages. 2 | Date: 26-03-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 104 - ಪುಟಗಳು : 2 | 26-03-2026 | ಗುರುವಾರ | Ph: 8762954248 | ದರ : ₹1


# ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕಲಿಸಲು ಸೂಚನೆ

## ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿ ರಿಚಾ ಖೋಡಾ | ಜಿಲ್ಲೆಗೆ ತಂಡ ಭೇಟಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪಿ.ಎಂ.ಶ್ರೀ. ಶಾಲೆಯಲ್ಲಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕಲ್ಪಿಸಲು ಅಧಿಕಾರಿ ಹಾಗೂ ಶಿಕ್ಷಕರು, ಮುಖ್ಯೋಪಾಧ್ಯಾಯರು ಕ್ರಮ ವಹಿಸಬೇಕು ಎಂದು ಭಾರತ ಸರ್ಕಾರ ನಿಯೋಜಿತ ಜಂಟಿ ಕಾರ್ಯದರ್ಶಿ ರಿಚಾ ಖೋಡಾ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶಾಲಾ ಮಟ್ಟದಲ್ಲಿ ಪಿ.ಎಂ. ಶ್ರೀ ಯೋಜನೆಯ ಅನುಷ್ಠಾನವನ್ನು ಪರಿಶೀಲಿಸಲು ಜಿಲ್ಲೆಯ ಪಿ.ಎಂ.ಶ್ರೀ. ಶಾಲೆಗಳಿಗೆ ಭಾರತ ಸರ್ಕಾರ ನಿಯೋಜಿತ ಜಂಟಿ ಕಾರ್ಯದರ್ಶಿಗಳ ತಂಡ ಭೇಟಿದ ಹಿನ್ನೆಲೆಯಲ್ಲಿ ಸಭೆ ನಡೆಸಿ ಮಾತನಾಡಿದರು.

ಶಾಲೆ ಕಟ್ಟಡ, ಆಟದ ಮೈದಾನ ಸೇರಿ ಇತರೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ತಿಳಿಸಿದರು.

ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ವಿದ್ಯಾಕುಮಾರಿ ಮಾತನಾಡಿ, ತರಗತಿಗೆ ತಕ್ಕಂತೆ ಪುಸ್ತಕಗಳನ್ನು ಶಾಲೆಗಳು ಖರೀದಿ ಅವಕಾಶ ಇದೆ. ಖರೀದಿಸಿ ವಿದ್ಯಾರ್ಥಿಗಳಿಗೆ ತಲುಪಿಸಬೇಕು ಎಂದರು.

ಈಗಾಗಲೇ ಸಾಕಷ್ಟು ಕ್ರೀಡಾ ಸಾಮಗ್ರಿ, ಲ್ಯಾಬ್ ಗೆ ಅಗತ್ಯವಿರುವ ಉಪಕರಣ ಹಾಗೂ ಇತರೆ ಅವಶ್ಯಕ ಸಾಮಗ್ರಿಗಳು ಖರೀದಿಗೆ ಅನುದಾನಗಳನ್ನು ಪಿ.ಎಂ. ಶ್ರೀ ಶಾಲೆಗಳಿಗೆ ನೀಡಲಾಗಿದ್ದು ಬಳಕೆ ಮಾಡುವಂತೆ ಸೂಚಿಸಿದರು.

ಎಲ್ಲಾ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಶೌಚಾಲಯ, ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಅಥವಾ ಸಿಎಸ್ಆರ್ ನಿಧಿಯಡಿಯಲ್ಲಿ ಹೆಚ್ಚುವರಿ ಶೌಚಾಲಯ ನಿರ್ಮಾಣ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾತನಾಡಿ, ಅತಿಥಿ ಶಿಕ್ಷಕರ ವೇತನ ಹೊರತುಪಡಿಸಿ ಇತರೆ ಸೌಲಭ್ಯಗಳಿಗೆ ಬಿಡುಗಡೆಯಾಗಿರುವ ಹಣವನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಸಮಗ್ರ ಶಿಕ್ಷಣ ಕರ್ನಾಟಕದ ಪ್ರೋಗ್ರಾಮಿಂಗ್ ಅಧಿಕಾರಿ ಶಶಿಕಲಾ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೆ.ಎನ್.ಬಲರಾಮ್ ಹಾಗೂ ಮತ್ತಿತರರು ಇದ್ದರು.

## ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಿ: ಡಿಸಿ

ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಹಾಗೂ ಗ್ರಾಮ ಪಂಚಾಯಿತಿಯ ವ್ಯಾಪ್ತಿಯನ್ನು ಸೌಂದರ್ಯಕರಣಗೊಳಿಸಿ ಪರಿಸರ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಹಾಗೂ ಮುಂದಿನ ಪೀಳಿಗೆಗೆ ಉತ್ತಮ ವಾತಾವರಣ ನಿರ್ಮಾಣ ಮಾಡುವ ಉದ್ದೇಶದಿಂದ ಅತಿ ಹೆಚ್ಚು ಗಿಡಗಳನ್ನು ಬೆಳೆಸುವ ಮೂಲಕ ಪರಿಸರವನ್ನು ಸಂರಕ್ಷಣೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಹಾಸನ ಜಿಲ್ಲೆಗಳ ನಗರದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ಪ್ರಗತಿ ಪರಿಶೀಲನೆ ಹಾಗೂ ಹಸಿರು ಹಾಸನ 2026 ಕುರಿತು ಸಭೆ ನಡೆಸಿ ಮಾತನಾಡಿದರು.

ಹಸಿರು ಹಾಸನ ಅಭಿಯಾನ ಅನುಷ್ಠಾನಕ್ಕೆ ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮುನ್ನ ಗಿಡಗಳನ್ನು ಬೆಳೆಸಲು ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದರು. ಜಿಲ್ಲೆಯ ಪ್ರತಿಯೊಂದು ಇಲಾಖೆ ವತಿಯಿಂದ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಸಿರು ಹಾಸನ 2026 ಅಭಿಯಾನದಡಿ ಕೆರೆ ಏರಿಗಳು, ಸರ್ಕಾರಿ ಕಚೇರಿ, ಶಾಲಾ-ಕಾಲೇಜು, ಕ್ರೀಡಾಂಗಣದ ಆವರಣ, ಆಟದ ಮೈದಾನ, ಉದ್ಯಾನವನದ ಸುತ್ತ, ರಾಷ್ಟ್ರೀಯ- ರಾಜ್ಯ ಹೆದ್ದಾರಿ ಅಕ್ಕ ಪಕ್ಕದಲ್ಲಿ, ರಸ್ತೆ ವಿಭಜಕಗಳಲ್ಲಿ, ಆಸ್ಪತ್ರೆ ಆವರಣಗಳಲ್ಲಿ ಖಾಲಿ ಇರುವ ಸರ್ಕಾರಿ ಜಾಗದಲ್ಲಿ 5 ಲಕ್ಷ ಗಿಡಗಳನ್ನು ನೆಟ್ಟು ಬೆಳೆಸಬೇಕು ಎಂದರು.

ನಗರದ ಎಲ್ಲೆಂದರಲ್ಲಿ ತ್ಯಾಜ್ಯ ವಿಲೇವಾರಿ ಮಾಡುವವರಿಗೆ ದಂಡ ವಿಧಿಸಬೇಕು. ಚರಂಡಿಗಳನ್ನು ಸ್ವಚ್ಛಗೊಳಿಸಬೇಕು, ಕುಡಿಯುವ ನೀರಿಗೆ ಕಲುಷಿತವಾಗಬಾರದು, ನೀರಿನ ಗುಣಮಟ್ಟ ಪರೀಕ್ಷೆಯಾಗಬೇಕು ಎಂದು ತಿಳಿಸಿದರು.

ನಗರೋತ್ಥಾನ ಯೋಜನೆಯಡಿ ಮಂಜೂರಾದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚನೆ ನೀಡಿದರು. ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವ ಆಗದಂತೆ ಎಚ್ಚರ ವಹಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರುದ್ರಮುನಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಎಸ್ಎಸ್ಎಲ್ಸಿ ವಿದ್ಯಾರ್ಥಿಗಳ ಮಾರಾಮಾರಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಗಂಧದ ಕೋಠಿ ಸರ್ಕಾರಿ ಪದವಿ ಪೂರ್ವ ಕಾಲೇಜು ಮುಂಭಾಗ ಬುಧವಾರ ಎಸ್ಎಸ್ಎಲ್ಸಿ ವಿದ್ಯಾರ್ಥಿಗಳ ನಡುವೆ ಮಾರಾಮಾರಿ ನಡೆದಿದೆ.

ಮಧ್ಯಾಹ್ನ 1.30ಕ್ಕೆ ಪರೀಕ್ಷೆ ಮುಗಿಸಿಕೊಂಡು ಹೊರ ಬಂದ ವಿದ್ಯಾರ್ಥಿಯೊಬ್ಬ ಮುಂದೆ ಹೊರಟಿದ್ದವನಿಗೆ ಹಿಂದಿನಿಂದ ಹೋಗಿ ಹೊಡೆದಿದ್ದಾನೆ. ತಕ್ಷಣ ಸುತ್ತುವರೆದ ಬೇರೆ ವಿದ್ಯಾರ್ಥಿಗಳು ಹಿಡಿದು ಹಿಗ್ಗಾ ಮುಗ್ಗಾ ಥಳಿಸಿದ್ದಾರೆ. ಮತ್ತೊಂದು ಗುಂಪು ಇನ್ನೊಬ್ಬ ವಿದ್ಯಾರ್ಥಿ ಮೇಲೆ ಏಕಾಏಕಿ ಎಗರಿ ಬಿದ್ದಿದೆ. ಸ್ಕೂಲ್ ಬ್ಯಾಗ್, ಸಮವಸ್ತ್ರ ಹರಿದು ಮನಬಂದಂತೆ ಥಳಿಸಿದ್ದಾರೆ. ಬೆಳಿಗ್ಗೆ ಪರೀಕ್ಷೆಗೆ ಹೋಗುವಾಗಲೇ ವಿದ್ಯಾರ್ಥಿಗಳು ಗಲಾಟೆ ಮಾಡಿಕೊಂಡಿದ್ದರು ಎನ್ನಲಾಗಿದೆ.

ವಿಷಯ ತಿಳಿದು ಪೊಲೀಸರು ದೌಡಾಯಿಸುತ್ತಿದ್ದಂತೆ ಹಲ್ಲೆ ಮಾಡುತ್ತಿದ್ದ ವಿದ್ಯಾರ್ಥಿಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಓಡಿದರು.

## ಗುಡ್ ಸಿಟಿಜನ್ ಕಾಲೇಜಿನಲ್ಲಿ ಕಾನೂನು ನೆರವು ಕಾರ್ಯಕ್ರಮ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಷ್ಟ್ರ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ಅತ್ಯಮೂಲ್ಯವಾಗಿದ್ದು ಬಾಲ್ಯದಿಂದಲೇ ಕಾನೂನು ಅರಿವು ಹೊಂದಿ ಅನ್ಯಾಯವನ್ನು ಪ್ರಶ್ನಿಸುವ ಧೈರ್ಯ ಬೆಳೆಸಿಕೊಳ್ಳಬೇಕು ಎಂದು ಗುಡ್ ಸಿಟಿಜನ್ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಹೇಮಂತ್ ಕುಮಾರ್ ಹೇಳಿದರು.

ಎಂ. ಕೃಷ್ಣ ಕಾನೂನು ಮಹಾವಿದ್ಯಾಲಯ ವತಿಯಿಂದ ಗುಡ್ ಸಿಟಿಜನ್ ಪದವಿ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅರಿವಿನ ಕೊರತೆಯಿಂದ ಸಾಕಷ್ಟು ಸಮಸ್ಯೆಗಳಾಗುತ್ತವೆ. ಪೋಕ್ಸೋ, ಬಾಲ ಕಾರ್ಮಿಕ ಪದ್ಧತಿ, ಸೈಬರ್ ಅಪರಾಧಗಳ ಕುರಿತು ಪ್ರತಿಯೊಬ್ಬರು ಅರಿತಿರಬೇಕು ಎಂದರು.

ಕಾನೂನಿನ ಜ್ಞಾನ ಇದ್ದರೆ ಮನುಷ್ಯ ತಪ್ಪು ಮಾಡುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನ ಎಲ್ಲರಿಗೂ ಬದುಕುವ ಹಕ್ಕು ನೀಡಿದೆ. ಜೊತೆಗೆ ಮೂಲಭೂತ ಕರ್ತವ್ಯ ಹಾಗೂ ಹಕ್ಕುಗಳನ್ನು ಕಲ್ಪಿಸಿದ್ದು ಅದರ ಪಾಲನೆ ಪ್ರತಿಯೊಬ್ಬರ ಜವಾಬ್ದಾರಿ ಎಂದು ಹೇಳಿದರು.

ಗುಡ್ ಸಿಟಿಜನ್ ಪದವಿ ಕಾಲೇಜು ಪ್ರಾಂಶುಪಾಲ ಕಾಂತರಾಜು ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕರಾದ ಸತೀಶ್, ಸಂಜಯ್ ಕುಮಾರ್, ಕಾನೂನು ವಿದ್ಯಾರ್ಥಿಗಳಾದ ಮಮತಾ ಚೌದರಿ, ಮನೋಜ್ ಇತರರು ಇದ್ದರು.

## ಕೃಷಿ ಕ್ಷೇತ್ರ ಅಭಿವೃದ್ಧಿಗೆ ತಂತ್ರಜ್ಞಾನದ ನೆರವು ಅಗತ್ಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಂತ್ರಜ್ಞಾನ ಮತ್ತು ಕೃಷಿ ಮಿಳಿತಗೊಂಡರೆ ಕೃಷಿ ಕ್ಷೇತ್ರದಲ್ಲಿ ಅಪಾರ ಬೆಳವಣಿಗೆ ಸಾಧ್ಯವೆಂದು ಹಾಸನ ಆಕಾಶವಾಣಿ ಕೃಷಿ ವಿಭಾಗದ ಮುಖ್ಯಸ್ಥ ಅರಕಲಗೂಡು ವಿ. ಮಧುಸೂದನ್ ಅಭಿಪ್ರಾಯಪಟ್ಟರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ, ಮೀರೈಸ್ ಫೌಂಡೇಶನ್ ಹಾಗೂ ಹಾಸನ ಆಕಾಶವಾಣಿ ಕೇಂದ್ರದ ಸಹಯೋಗದಲ್ಲಿ ಬುಧವಾರ ಆಯೋಜಿಸಿದ ಕೃಷಿ ಮಂಥನ್ ಹ್ಯಾಕಥಾನ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ತಂತ್ರಜ್ಞಾನ ಕೃಷಿಕರ ಹೊಲಗಳಿಗೆ ನೇರವಾಗಿ ಪ್ರವೇಶಿಸಿದರೆ ನಿರೀಕ್ಷೆಗೂ ಮೀರಿ ಸಾಧನೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ತಾಂತ್ರಿಕ ಸಂಸ್ಥೆಗಳು ಕೃಷಿಕರೊಂದಿಗೆ ಸಂವಾದ ನಡೆಸಿದರೆ ಕೃಷಿ ಸಮಸ್ಯೆಗಳ ಆಳ ಅರಿತು ಉತ್ತಮ ಪರಿಹಾರ ಕಂಡುಕೊಳ್ಳಬಹುದು ಎಂದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಎಐ ತಂತ್ರಜ್ಞ ಎಂ.ಜಿ. ಕಿರಣ್, ತಂತ್ರಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸುವುದು ದೊಡ್ಡ ಸವಾಲು. ಕೃಷಿಕರು ಹೊಸ ತಂತ್ರಜ್ಞಾನ ಅಳವಡಿಸುವಾಗ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳು ಕೃಷಿಕರ ಸಮಸ್ಯೆಗಳಿಗೆ ನಿಷ್ಠೆಯಿಂದ ಪರಿಹಾರ ಹುಡುಕಬೇಕು ಎಂದು ಕರೆ ನೀಡಿದರು.

ಸಮಾರಂಭ ಉದ್ಘಾಟಿಸಿದ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ ಮಾತನಾಡಿ, ಕೃಷಿಕರ ಸಮಸ್ಯೆಗಳಿಗೆ ಸ್ಪಂದಿಸುವ ಈ ಪ್ರಯತ್ನ ಶ್ಲಾಘನೀಯ ಎಂದು ಹೇಳಿದರು.

ಪ್ರಧಾನ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್, ಕೃಷಿಕರಿಗೆ ನೆರವಾಗುವ ತಂತ್ರಜ್ಞಾನ ಅಭಿವೃದ್ಧಿ ಅಗತ್ಯವಿದ್ದು, ಸರ್ಕಾರ ಉತ್ತಮ ಮಾರುಕಟ್ಟೆ ಒದಗಿಸಬೇಕು ಎಂದರು.

ಮೀರೈಸ್ ಫೌಂಡೇಶನ್ ಸಿಇಒ ಡಾ.ಗೀತಾ ಕಿರಣ್ ಪ್ರಸ್ತಾವಿಕವಾಗಿ ಮಾತನಾಡಿ, 36 ಗಂಟೆಗಳ ರಾಜ್ಯ ಮಟ್ಟದ ಹ್ಯಾಕಥಾನ್‌ನಲ್ಲಿ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

61 ತಂಡಗಳಿಗೆ ಕೃಷಿ ಸಮಸ್ಯೆಗಳ ಪರಿಹಾರ ಹುಡುಕುವ ಜವಾಬ್ದಾರಿ ನೀಡಲಾಗಿದೆ ಎಂದರು. ವಿಜೇತ ತಂಡಗಳಿಗೆ ಬಹುಮಾನ ಘೋಷಿಸಲಾಗಿದೆ.


ಕಾರ್ಯಕ್ರಮದ ಬಳಿಕ ಕೃಷಿಕರಿಗೆ ಡ್ರೋನ್ ಪ್ರದರ್ಶನ ಆಯೋಜಿಸಲಾಗಿದ್ದು, ವಿವಿಧ ಕಂಪನಿಗಳ ಡ್ರೋನ್‌ಗಳ ಮೂಲಕ ಪೋಷಕಾಂಶ ಮತ್ತು ಔಷಧಿ ಸಿಂಪಡಣೆ ಕುರಿತು ಮಾಹಿತಿ ನೀಡಲಾಯಿತು.

ಜಿಲ್ಲೆಯ ವಿವಿಧ ಭಾಗಗಳ 60ಕ್ಕೂ ಹೆಚ್ಚು ಕೃಷಿಕರು ಭಾಗವಹಿಸಿದ್ದರು.

ಸಂಸ್ಥೆಯ ಖಜಾಂಚಿ ಹೆಚ್.ಡಿ. ಪಾರ್ಶ್ವನಾಥ್, ಪ್ರಾಂಶುಪಾಲ ಡಾ. ಹೆಚ್.ಜೆ.ಅಮರೇಂದ್ರ, ರೈತ ಮುಖಂಡ ಕೆ.ಎಂ. ರಾಜೇಗೌಡ ಇತರರಿದ್ದರು.

## ವಿಜೃಂಭಣೆಯ ಬೇಲೂರು ಚನ್ನಕೇಶವ ಕಲ್ಯಾಣೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ಲೋಕ ಕಲ್ಯಾಣಕ್ಕಾಗಿ ಜಗತ್ಪ್ರಸಿದ್ಧ ಬೇಲೂರು ಚನ್ನಕೇಶವ ದೇವರಿಗೆ ವಿವಾಹ ನೆರವೇರಿಸಲಾಗಿದೆ. ರಥೋತ್ಸವ ಅಂಗವಾಗಿ ಚೆಲುವ ಚನ್ನಿಗನೆಂದೇ ಪ್ರಖ್ಯಾತಿಯಾದ ಚನ್ನಕೇಶವನಿಗೆ ರಾತ್ರಿ ಸಂಪ್ರದಾಯಬದ್ಧವಾಗಿ ಕಲ್ಯಾಣೋತ್ಸವ ಸಡಗರ ಸಂಭ್ರಮದಿಂದ ನೆರವೇರಿಸಲಾಯಿತು.

ರಥೋತ್ಸವ, ಹರಕೆ ಹಾಗೂ ವಿಶೇಷ ಸಂದರ್ಭಗಳಲ್ಲಿ ದೇವತಾ ಕಲ್ಯಾಣೋತ್ಸವ ಮಾಡಲಾಗುತ್ತದೆ. ಮನುಷ್ಯರಿಗೆ ಮಾಡುವ ಮದುವೆಯಲ್ಲಿ ಮಾಂಗಲ್ಯ ತಂತುನಾನೇನಾ ಮಮಜೀವನ ಹೇತುನಾ ಎಂದರೆ ಈ ಮಾಂಗಲ್ಯದಿಂದ ಎಲ್ಲ ಜೀವನಕ್ಕೆ ಒಳಿತಾಗಲಿ ಎಂಬ ಮಂತ್ರವಿದ್ದರೆ, ದೇವತಾ ಕಲ್ಯಾಣದಲ್ಲಿ ಮಾಂಗಲ್ಯ ತಂತುನಾನೇನಾ ಜಗಜೀವನ ಹೇತುನಾ ಎಂಬುದಾಗಿ ಮಂತ್ರ ಹೇಳಲಾಗುತ್ತದೆ.

ಇದೇ ಸಂಪ್ರದಾಯದಂತೆ ಬೇಲೂರಿನ ಜಗದ್ವಿಖ್ಯಾತ ಚನ್ನಕೇಶವಸ್ವಾಮಿ ದೇವಾಲಯದಲ್ಲಿ ಚನ್ನಕೇಶವನ ಪತ್ನಿಯರಾದ ಶ್ರೀದೇವಿ (ಸೌಮ್ಯನಾಯಕಿ) ಮತ್ತು ಭೂದೇವಿ (ರಂಗನಾಯಕಿ) ಅವ ರೊಂದಿಗೆ ಸಾಂಪ್ರದಾಯಿಕವಾಗಿ ವಿವಾಹವನ್ನು ನೆರವೇರಿಸಲಾಗುತ್ತದೆ.

ಹೀಗೆ ಸರ್ವ ಸಂಪ್ರದಾಯಗಳಿಂದ ವಿವಾಹ ನೆರವೇರಿಸಿ ಉತ್ಸವ ಮೂರ್ತಿಗಳನ್ನು ವಧುವರರಂತೆ ಪ್ರಾಕಾರ ಮೆರವಣಿಗೆ ಮಾಡಿ ಗರ್ಭಗೃಹಕ್ಕೆ ಸೇರಿ ಸಲಾಗುತ್ತದೆ. ಈ ಎಲ್ಲಾ ಕಾರ್ಯಗಳಿಗೆ ಪೂರ್ವಭಾವಿಯಾಗಿ ಸುಹಾಸಿನಿಯರಿಂದ ಹರಿಷಿಣ ಕುಟ್ಟುವುದು, ಗೋಧಿ ಕಲ್ಲು ಶಾಸ್ತ್ರಗಳು ನಡೆದಿರುತ್ತವೆ. ವಿವಾಹದ 3ನೇ ದಿನ ವಿವಾಹ ಸಂಬಂಧಿ ನಾಗೋಲಿ ಹೋಮ ಸಮೇತವಾಗಿ ನಡೆಯುತ್ತದೆ. ಭಕ್ತರು ಮದುವೆಗಳಂತೆ ಉತ್ಸಾಹ, ಸಂಭ್ರಮದಿಂದ ಕಲ್ಯಾಣೋತ್ಸವದಲ್ಲಿ ಭಾಗವಹಿಸಿ ಪುನೀತರಾದರು. ಹೀಗೆ ಬೇಲೂರು ಚನ್ನಕೇಶವ ದೇವಾಲಯದಲ್ಲಿ ಕಲ್ಯಾಣೋತ್ಸ ವ ಸಾಂಪ್ರದಾಯಿಕವಾಗಿ ಸಡಗರ ಸಂಭ್ರಮದಿಂದ ನಡೆಯಿತು.

ದೇವಾಲಯದ ಪ್ರಧಾನ ಆಗಮಿಕರಾದ ಶ್ರೀನಿವಾಸ ಭಟ್ಟರ್ ಮತ್ತು ನರಸಿಂಹ ಭಟ್ಟರು ವಿವಾಹ ವಿಧಿಗಳನ್ನು ನೆರವೇರಿಸಿದರು. ಮುಂಬೈನ ನರಸಿಂಹನ್ ಅವರು ಕಲ್ಯಾಣೋತ್ಸವದ ಪ್ರಾಯೋಜಕರಾಗಿದ್ದರು.

ಪೂಜಾ ಕಾರ್ಯದಲ್ಲಿ ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ದೇಗುಲದ ಕಾರ್ಯನಿರ್ವಾಹಕ ಅಧಿಕಾರಿ ಯೋಗೇಶ್, ಪುರಸಭಾ ಸದಸ್ಯ ಶೈಲೇಶ್, ನಾಲ್ಕು ಮೂಲೆ ಅಡ್ಡೆಗಾರರು, ಸಹಸ್ರಾರು ಭಕ್ತರು ಇದ್ದರು.

## ಮಾ. 27ಕ್ಕೆ ಪೊಲೀಸರಿದ್ದಾರೆ ಎಚ್ಚರಿಕೆ ನಾಟಕ ಪ್ರದರ್ಶನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ವಿಶ್ವಪಥ ಚಾರಿಟಬಲ್ ಟ್ರಸ್ಟ್ ವತಿಯಿಂದ 5ನೇ ಬಾರಿಗೆ ಖ್ಯಾತ ಸಾಹಿತಿ ಪಿ.ಲಂಕೇಶ್ ರಚಿಸಿರುವ ಪ್ರಸಿದ್ಧ ಗುಣಮಟ್ಟದ ನಾಟಕ ಪೊಲೀಸರಿದ್ದಾರೆ ಎಚ್ಚರಿಕೆ ನಾಟಕವನ್ನು ಮಾ.27ರಂದು ಸಂಜೆ 7 ರಿಂದ 8 ಗಂಟೆ ವರೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಲಾಗುತ್ತಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಯದೀಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ರಂಗಭೂಮಿ ಸಮಾಜದ ಪ್ರತಿಬಿಂಬವಾಗಿದ್ದು, ಸಾಮಾಜಿಕ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಈ ನಿಟ್ಟಿನಲ್ಲಿ ಲಂಕೇಶ್ ಅವರ ಕೃತಿ ಪ್ರಸ್ತುತ ಸಂದರ್ಭಕ್ಕೂ ಅನ್ವಯವಾಗುವ ಸಂದೇಶ ಒಳಗೊಂಡಿದ್ದು, ಮೈಸೂರು ದಸರಾ ವೇದಿಕೆಯಲ್ಲೂ ಪ್ರದರ್ಶನಗೊಂಡಿರುವ ನಾಟಕ, ಪ್ರೇಕ್ಷಕರಲ್ಲಿ ಚಿಂತನೆಗೆ ದಾರಿ ಮಾಡಿಕೊಡಲಿದೆ ಎಂದರು.

ನಾಟಕವನ್ನು ಯದೀಶ್ ಅವರು ನಿರ್ಮಾಣ ಮಾಡಿದ್ದು, ಪ್ರದೀಪ್ ರಂಗಾಯಣ ಅವರು ನಿರ್ದೇಶನ ಮಾಡಿದ್ದಾರೆ. ನಾಟಕದಲ್ಲಿ ಪ್ರದೀಪ್ ರಂಗಾಯಣ, ಯದೀಶ್ ಹಾಗೂ ಅಣ್ಣಾಜಿಗೌಡ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದು, 50 ನಿಮಿಷಗಳ ಕಾಲ ಪ್ರದರ್ಶನಗೊಳ್ಳಲಿದೆ ಎಂದರು.

ನಾಟಕದ ತಾಂತ್ರಿಕ ಅಂಶಗಳಿಗೂ ವಿಶೇಷ ಪ್ರಾಮುಖ್ಯತೆ ನೀಡಲಾಗಿದೆ. ಬೆಳಕು ವಿನ್ಯಾಸವನ್ನು ಗುರು ತಲಕಾಡು ಅವರು ನಿರ್ವಹಿಸಿದ್ದು, ಸಂಗೀತ ಸಂಯೋಜನೆಯನ್ನು ಧನಂಜಯ ಆರ್.ಸಿ ನೀಡಿದ್ದಾರೆ. ಸಂಗೀತ ನಿರ್ವಹಣೆಯನ್ನು ಶ್ರೀಧರ ಅವರು ಕೈಗೊಂಡಿದ್ದು, ನಾಟಕದ ವಾತಾವರಣಕ್ಕೆ ಹೊಂದುವಂತೆ ಕಲಾತ್ಮಕ ವಿನ್ಯಾಸ ರೂಪಿಸಲಾಗಿದೆ. ಪತ್ರಕರ್ತರು ಸೇರಿದಂತೆ ಎಲ್ಲರೂ ಆಗಮಿಸಿ ತಪ್ಪು-ಒಪ್ಪುಗಳ ಬಗ್ಗೆ ವಿಮರ್ಶೆ ಮಾಡಿದರೆ ತಿದ್ದುಕೊಳ್ಳಲು ಸಹಕಾರಿ ಆಗಲಿದೆ ಎಂದು ನುಡಿದರು.

## ಅರಸೀಕಟ್ಟೆಯಲ್ಲಿ ಕಲ್ಲು ಗಣಿಗಾರಿಕೆ ನಿಷೇಧಕ್ಕೆ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಅರಕಲಗೂಡು ತಾಲೂಕು ಮಲ್ಲಿಪಟ್ಟಣ ಹೋಬಳಿ ಆರಸೀಕಟ್ಟೆ ಕಾವಲು ಪ್ರದೇಶಕ್ಕೆ ಸೇರಿದ ಸರ್ವೆ ನಂ.116 ರಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಯನ್ನು ಕೂಡಲೇ ನಿಲ್ಲಿಸಬೇಕು ಎಂದು ಅರಕಲಗೂಡು ಕಾವಲು ಸಮಿತಿ ಅಧ್ಯಕ್ಷ ಹೆಚ್. ವಿಜಯಕುಮಾರ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಕಲ್ಲು ಗಣಿಗಾರಿಕೆ ಸ್ಥಳೀಯರ ಬದುಕಿಗೆ ದೊಡ್ಡ ಸಂಕಷ್ಟವಾಗಿ ಪರಿಣಮಿಸಿದೆ. ನಿಯಮ ಉಲ್ಲಂಘಿಸಿ ನಡೆಯುತ್ತಿರುವ ಈ ಗಣಿಗಾರಿಕೆಯಿಂದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಪರಿಸರ ಹಾನಿ ತೀವ್ರವಾಗಿದ್ದು, ಜನರು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಗಣಿಗಾರಿಕೆ ವೇಳೆ ಭಾರೀ ಸ್ಫೋಟಗಳಿಂದ ಮನೆಗಳ ಗೋಡೆಗಳಲ್ಲಿ ಬಿರುಕು ಉಂಟಾಗುತ್ತಿವೆ ಎಂದು ದೂರಿದರು.

ನಿರಂತರವಾಗಿ ಏಳುವ ಧೂಳು ಮತ್ತು ಕಲ್ಲುಬಂಡೆಗಳ ಚೆಲ್ಲಾಟಗಳಿಂದ ವಾಯುಮಾಲಿನ್ಯ ಹೆಚ್ಚಾಗಿ, ಉಸಿರಾಟದ ತೊಂದರೆ ಸೇರಿದಂತೆ ಹಲವು ಆರೋಗ್ಯ ಸಮಸ್ಯೆ ಕಂಡುಬರುತ್ತಿವೆ.

ವಿಶೇಷವಾಗಿ ಹಿರಿಯ ನಾಗರಿಕರು ಮತ್ತು ಶಾಲಾ ಮಕ್ಕಳು ಹೆಚ್ಚು ಸಂಕಷ್ಟ ಅನುಭವಿಸುತ್ತಿದ್ದಾರೆ. ಪ್ರಮುಖವಾಗಿ ಶಾಲಾ ಮಕ್ಕಳ ವಿದ್ಯಾಭ್ಯಾಸದ ಮೇಲೆ ಪರಿಣಾಮ ಬೀರಿದೆ. 16 ಮಕ್ಕಳು ಶಾಲೆಗೆ ಹೋಗುವುದನ್ನೇ ನಿಲ್ಲಿಸಿ ಪ್ರತಿಭಟನೆ ಮಾಡುತ್ತಿದ್ದಾರೆ ಎಂದರು.

ಪೋಷಕರು ಕೂಡ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಶಾಲೆಗೆ ಕಳುಹಿಸಲು ಹಿಂಜರಿಯುತ್ತಿದ್ದಾರೆ. ಇದರಿಂದ ಮಕ್ಕಳ ಭವಿಷ್ಯವೇ ಅಪಾಯಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಕೃಷಿ ಚಟುವಟಿಕೆಗಳಿಗೂ ಗಣಿಗಾರಿಕೆ ದೊಡ್ಡ ಹೊಡೆತ ನೀಡಿದೆ. ಧೂಳು ಹೊಲಗಳ ಮೇಲೆ ಹರಡಿ, ಬೆಳೆಗಳ ಬೆಳವಣಿಗೆಗೆ ಅಡ್ಡಿಯಾಗುತ್ತಿದೆ. ಜೊತೆಗೆ ರೈತರು ಹೊಲಗಳಿಗೆ ತೆರಳಲು ಭಯಪಡುವ ಸ್ಥಿತಿ ಉಂಟಾಗಿದೆ. ಇದರಿಂದ ಉತ್ಪಾದನೆ ಕುಸಿದು, ರೈತರ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಹಲವರು ಸಾಲದ ಬಾಧೆಗೂ ಒಳಗಾಗಿದ್ದಾರೆ ಎಂದು ದೂರಿದರು.

ಈ ಬಗ್ಗೆ ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳು, ಸಚಿವರು, ಕೋರ್ಟ್‌ಗೂ ದೂರು ನೀಡಿದರೂ ಯಾವುದೇ ಪ್ರಯೋಜನ ಆಗಿಲ್ಲ. ಕೋರ್ಟ್ ಪುನರ್ ಪರಿಶೀಲನೆ ವರದಿ ನೀಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸಿದ್ದರೂ, ಈವರೆಗೂ ನೀಡಿಲ್ಲ. ಇದರಲ್ಲಿ ಹಲವರು ಶಾಮೀಲಾಗಿದ್ದಾರೆ ಎಂದು ಆರೋಪಿಸಿದರು. ಸದ್ಯ ಅಲ್ಲಿನ ಶಾಲೆ ದೇವಾಲಯದಲ್ಲಿ ನಡೆಯುತ್ತಿದೆ. ಕಳೆದ ಮೂರು ದಿನಗಳಿಂದ ಪ್ರತಿಭಟನೆ ಸಹ ಮುಂದುವರಿದಿದೆ. ಮಂಗಳವಾರ ಜಿಲ್ಲಾಧಿಕಾರಿ ಸ್ಥಳ ಪರಿಶೀಲನೆ ನಡೆಸಿರುವುದು ಸಮಾಧಾನ ತರಿಸಿದ್ದು, ಇನ್ನಾದರೂ ಸಮಸ್ಯೆಗೆ ಇತಿಶ್ರೀ ಹಾಡಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ದೇವರಾಜು, ಪ್ರಸನ್ನ, ಯಶವಂತ್, ರವಿ, ರಮೇಶ್ ಇದ್ದರು.

# ಸಾವು ಗೆದ್ದ ತಾಯಿ-ಮಗು: ಹಿಮ್ಸ್‌ನಲ್ಲಿ ಅಪರೂಪದ ಶಸ್ತ್ರ ಚಿಕಿತ್ಸೆ

## 15 ವೈದ್ಯರ ಸಮಯೋಚಿತ ಪ್ರಯತ್ನ | ವ್ಯಾಪಕ ಪ್ರಶಂಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಪಘಾತದಲ್ಲಿ ಗಂಭೀರ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ಒಂಬತ್ತು ತಿಂಗಳ ತುಂಬು ಗರ್ಭಿಣಿಗೆ ಯಶಸ್ವಿ ಶಸ್ತ್ರ ಚಿಕಿತ್ಸೆ ಮಾಡಿರುವ ಹಿಮ್ಸ್ ವೈದ್ಯರು ತಾಯಿ ಮತ್ತು ಮಗುವನ್ನು ರಕ್ಷಿಸಿರುವ ಅಪರೂಪದ ಘಟನೆ ನಡೆದಿದೆ.

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನ್ಯೂರೋ ಸರ್ಜನ್ ಡಾ. ಅಮೋಘ್ ಅವರು ಮಹಿಳೆಯ ಮೆದುಳು ಶಸ್ತ್ರ ಚಿಕಿತ್ಸೆ ಮಾಡಿದರೆ, ಅದೇ ಸಮಯದಲ್ಲಿ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞರಾದ ಡಾ. ರಾಜಶೇಖರ್, ಡಾ. ಶೃತಿ ಅವರ 15 ಜನರ ತಂಡ ಸಿಸೇರಿಯನ್ ಮೂಲಕ ಮಗುವಿನ ಪ್ರಾಣ ಉಳಿಸಿದ್ದಾರೆ. ಒಂದೇ ಸಮಯಕ್ಕೆ ನಡೆದ ಎರಡೂ ಶಸ್ತ್ರ ಚಿಕಿತ್ಸೆಗೆ ಬರೋಬ್ಬರಿ 3 ಗಂಟೆ ಸಮಯ ತೆಗೆದುಕೊಂಡಿದ್ದಾರೆ. ವೈದ್ಯರ ದೃಢ ನಿರ್ಧಾರವು ಬಡಕುಟುಂಬವನ್ನು ಪ್ರಾಣಾಪಾಯದಿಂದ ಪಾರು ಮಾಡಿದೆ.




### ಮಾ. 17ರಂದು ಅಪಘಾತ

ಚನ್ನರಾಯಪಟ್ಟಣದ ನಾಗವೇಣಿ ಸಾವು ಗೆದ್ದ ಮಹಿಳೆ. ಮಾ. 17ರ ಸಂಜೆ 4 ಗಂಟೆ ಪಟ್ಟಣದಲ್ಲಿ ಬೈಕ್‌ನಲ್ಲಿ ಹೋಗುತ್ತಿದ್ದಾಗ ಅಪಘಾತ ಸಂಭವಿಸಿತ್ತು. ತಲೆಗೆ ತೀವ್ರ ಪೆಟ್ಟು ಬಿದ್ದು ಅತಿಯಾದ ರಕ್ತಸ್ರಾವದಿಂದ ಕೋಮಾಗೆ ಜಾರಿದ್ದರು. ಪರಿಸ್ಥಿತಿ ಅತ್ಯಂತ ಗಂಭೀರವಾಗಿ ಬದುಕುವ ಸಾಧ್ಯತೆ ಅತೀ ಕಡಿಮೆ ಎಂದು ವೈದ್ಯರು ಅಂದಾಜಿಸಿದ್ದರು.

ಆದರೆ ಹಿಮ್ಸ್ ವೈದ್ಯರ ತಂಡ ಸವಾಲು ಸ್ವೀಕರಿಸಿ ತಕ್ಷಣವೇ ಕಾರ್ಯಪ್ರವೃತ್ತವಾಯಿತು. ತಾಯಿ ಜೀವ ಉಳಿಸುವುದೂ, ಗರ್ಭದಲ್ಲಿದ್ದ ಮಗುವನ್ನು ಸುರಕ್ಷಿತವಾಗಿ ಕಾಪಾಡುವುದೂ ಒಂದೇ ಸಮಯದಲ್ಲಿ ಮಾಡುವ ದೊಡ್ಡ ಸವಾಲಾಗಿತ್ತು.

### ಮಿದುಳಿನಲ್ಲಿ ರಕ್ತಸ್ರಾವ ತಂದ ಆಪತ್ತು

ಅಂಬುಲೆನ್ಸ್ ಮೂಲಕ ಸಂಜೆ 7 ಗಂಟೆಗೆ ಹಿಮ್ಸ್‌ಗೆ ಬಂದಾಗ ಅವರು ಸಂಪೂರ್ಣ ಕೋಮಾ ಸ್ಥಿತಿಯಲ್ಲಿದ್ದರು. ತಕ್ಷಣವೇ ವೈದ್ಯರು ಸಿಟಿ ಸ್ಕ್ಯಾನ್ ಮಾಡಿದಾಗ ಮಿದುಳಿನಲ್ಲಿ ರಕ್ತ ಸೋರುತ್ತಿರುವುದು ದೃಢಪಟ್ಟಿತು. ಅಪಘಾತದಿಂದ 400 ರಿಂದ 500 ಎಂಎಲ್ ರಕ್ತಸ್ರಾವವಾಗಿತ್ತು. ಮಿದುಳಿನಲ್ಲೂ ರಕ್ತ ಸೋರಿಕೆಯಾಗಿ ಅದು ರಕ್ತದೊತ್ತಡಕ್ಕೆ ಕಾರಣವಾಗಿ ಪ್ರಾಣಕ್ಕೆ ಕುತ್ತು ತರುವ ಸಾಧ್ಯತೆ ಹೆಚ್ಚಿತ್ತು. ತಕ್ಷಣ ಸಮಸ್ಯೆ ಪರಿಹಾರಕ್ಕೆ ಇಂಜೆಕ್ಷನ್ ನೀಡಲಾಯಿತಾದರೂ ಫಲಪ್ರದವಾಗಲಿಲ್ಲ. ಆಗ ವೈದ್ಯರು ಸಹ ಮಹಿಳೆಯ ಪ್ರಾಣ ಉಳಿಸುವ ಕುರಿತು ಆಶ್ವಾಸನೆ ನೀಡುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಹೆಂಡತಿ ಮತ್ತು ಮಗುವನ್ನು ಉಳಿಸಿಕೊಳ್ಳಲೇಬೇಕೆಂದು ಪ್ರಾರ್ಥಿಸುತ್ತಿದ್ದ ನಾಗವೇಣಿ ಪತಿಯು ಬೆಂಗಳೂರು ಅಥವಾ ಮಂಗಳೂರಿನ ಆಸ್ಪತ್ರೆಗೆ ಕರೆದೊಯ್ಯುತ್ತೇನೆಂದು ಪಟ್ಟು ಹಿಡಿದಿದ್ದರು. ಆದರೆ ನ್ಯುರೋ ಸರ್ಜನ್ ಡಾ. ಅಮೋಘ್ ಅವರು ಅದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಮಿದುಳಿನಲ್ಲಿ ರಕ್ತ ಸೋರಿಕೆ ತಡೆಯಬೇಕೆಂದರೆ ತಕ್ಷಣ ಶಸ್ತ್ರಚಿಕಿತ್ಸೆ ಆಗಬೇಕು.

> ಸಿಸೇರಿಯನ್ ಹಾಗು ಮತ್ತೊಂದು ಶಸ್ತ್ರ ಚಿಕಿತ್ಸೆ ಸವಾಲಿನ ಕೆಲಸವಾಗಿತ್ತು. ನಮ್ಮ 15 ವೈದ್ಯರ ತಂಡದ ಸಮಯೋಚಿತ ಕೆಲಸಕ್ಕೆ ಫಲ ಸಿಕ್ಕಿದೆ. ಹಾಸನದಲ್ಲಿ ಇಂತಹ ಶಸ್ತ್ರ ಚಿಕಿತ್ಸೆ ನಡೆದಿರುವುದು ಅಪರೂಪ. ತಾಯಿ ಮತ್ತು ಮಗು ಇಬ್ಬರೂ ಆರೋಗ್ಯವಾಗಿದ್ದಾರೆ.
>
> **- ಡಾ. ಅಮೋಘ್, ನ್ಯುರೋ ಸರ್ಜನ್**

ದೂರದ ಆಸ್ಪತ್ರೆಗೆ ಕರೆದೊಯ್ಯುವಷ್ಟು ಸಮಯವಿಲ್ಲ ಎಂದು ಅವರಿಗೆ ತಿಳಿಹೇಳಿದರು.

ಪ್ರಸೂತಿ ಮತ್ತು ನ್ಯೂರೋ ಸರ್ಜರಿ ತಂಡ ಅಂತಿಮ ನಿರ್ಧಾರಕ್ಕೆ ಬಂದು ತಲೆ ಹಾಗು ಸಿಸೇರಿಯನ್ ಮಾಡುವ ಕಾರ್ಯಕ್ಕೆ ಕೈ ಹಾಕಿದರು. ಮೂರು ಗಂಟೆಗಳ ನಿರಂತರ ಪ್ರಯತ್ನದ ಬಳಿಕ ಮಗುವನ್ನು ಸುರಕ್ಷಿತವಾಗಿ ಹೊರ ತೆಗೆದರೆ ನಾಗವೇಣಿ ಅವರನ್ನು ವೆಂಟಿಲೇಟರ್‌ನಲ್ಲಿ ಇರಿಸಿದರು. ಒಂದು ದಿನದ ಬಳಿಕ ನಾಗವೇಣಿ ಚೇತರಿಸಿಕೊಂಡರು. ಆ ಮೂಲಕ ಸಾವಿನ ದವಡೆಯಿಂದ ತಾಯಿ-ಮಗು ಪಾರಾಗಿದ್ದಾರೆ.

ಮಗು 2.6 ಕೆ.ಜಿ. ಇದ್ದು ಆರೋಗ್ಯವಾಗಿದೆ. ಈಗ ತಾಯಿ ಎದೆ ಹಾಲು ಕುಡಿಯುತ್ತಿದೆ. ನಾಗವೇಣಿ ಅವರಿಗೆ ಸ್ವಲ್ಪ ನೋವಿದ್ದು ಹಂತ ಹಂತವಾಗಿ ಗುಣಮುಖರಾಗುತ್ತಾರೆಂದು ವೈದ್ಯರು ತಿಳಿಸಿದ್ದಾರೆ.

# ವ್ಯಕ್ತಿತ್ವ ವಿಕಸನಕ್ಕೆ ಶಿಕ್ಷಣವೇ ಭದ್ರ ಬುನಾದಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ವ್ಯಕ್ತಿತ್ವ ವಿಕಸನಕ್ಕೆ ಶಿಕ್ಷಣವೇ ಬುನಾದಿ ಎಂದು ಯಳನಾಡು ಮಹಾ ಸಂಸ್ಥಾನದ ಶ್ರೀ ಜ್ಞಾನಪ್ರಭು ಸಿದ್ದರಾಮದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ನಗರದ ವಿವೇಕಾನಂದ ಬಿಇಡಿ ಕಾಲೇಜಿನಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಸಂಘ, ಸಮಿತಿಗಳ ಚಟುವಟಿಕೆಗಳಿಗೆ ಚಾಲನೆ ನೀಡಿ ಮಾತನಾಡಿದರು. ಮನುಷ್ಯ ಸಂಘ ಜೀವಿಯಾಗಿದ್ದು ಉತ್ತಮ ಸಂಸ್ಕೃತಿ, ಸಂಸ್ಕಾರ ಪಡೆಯಲು ಶಿಕ್ಷಣ ಪಡೆಯುವ ಅಗತ್ಯವಿದೆ. ಕಲಿತ ವಿದ್ಯೆಯ ಬಲದಿಂದ ಆದರ್ಶ ಜೀವನ ನಡೆಸಿದರೆ ಮಾತ್ರವೇ ಬದುಕು ಸಾರ್ಥಕತೆ ಪಡೆಯಲಿದೆ. ವಿವೇಕಾನಂದ ಬಿಇಡಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಸಹಸ್ರಾರು ವಿದ್ಯಾರ್ಥಿಗಳು ಉನ್ನತ ಹುದ್ದೆಗಳನ್ನು ಅಲಂಕರಿಸಿ ನಾಡಿನ ಸೇವೆಯಲ್ಲಿ ತೊಡಗಿಸಿಕೊಂಡಿರುವುದು ಹೆಮ್ಮೆಯ ವಿಷಯವಾಗಿದೆ. ಈ ನಿಟ್ಟಿನಲ್ಲಿ ಹೊಸದಾಗಿ ದಾಖಲಾಗಿರುವ ಪ್ರಶಿಕ್ಷಣಾರ್ಥಿಗಳು ಕಾಲೇಜಿನಲ್ಲಿ ದೊರೆಯುವ ಸೌವಲತ್ತಗಳನ್ನು ಸದ್ಬಳಕೆ ಮಾಡಿಕೊಂಡು ಶೈಕ್ಷಣಿಕ ಪ್ರಗತಿ ಸಾಧಿಸಿ ಎಂದು ಕಿವಿಮಾತು ಹೇಳಿದರು.




ಕಲ್ಮುರುಡೇಶ್ವರ ತಪೋವನದ ಕರಡಿಗವಿ ಮಹಾಸಂಸ್ಥಾನದ ಶ್ರೀ ಶಿವಶಂಕರ ಶಿವಯೋಗಿ ಸ್ವಾಮೀಜಿ ಮಾತನಾಡಿ, ಕಾಲೇಜಿನಲ್ಲಿ ಕನ್ನಡ, ವಿಜ್ಞಾನ, ಗ್ರಂಥಾಲಯ, ಕ್ರೀಡೆ, ನ್ಯಾಕ್, ಶಿಸ್ತು ಪಾಲನೆ ಸೇರಿ ಹಲವು ಬಗೆಯ ಸಂಘ, ಸಮಿತಿ ರಚಿಸಿರುವುದು ಶ್ಲಾಘನೀಯ.

ಆಧುನಿಕ ಹಾಗೂ ಸ್ಪರ್ಧಾತ್ಮಕ ಜಗತ್ತಿಗೆ ತೆರೆದುಕೊಳ್ಳುವ ಅನಿವಾರ್ಯತೆ ಎಲ್ಲರ ಮುಂದಿದೆ. ಶಿಕ್ಷಣದ ಸಹಾಯದಿಂದ ಪರಿಪಕ್ವ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯವಿದೆ ಎಂಬುದನ್ನು ಎಲ್ಲರೂ ಮನಗಾಣಬೇಕು ಎಂದು ಹೇಳಿದರು. ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಬಿ ಕುಡವಕ್ಕಲಗಿ ಮಾತನಾಡಿ, ಪ್ರಶಿಕ್ಷಣಾರ್ಥಿಗಳು ವಿಷಯಾಧಾರಿತ ಕಲಿಕೆ ಜತೆಗೆ ಸಂಘ, ಸಮಿತಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸರ್ವಾಂಗೀಣ ಪ್ರಗತಿ ಸಾಧಿಸಬೇಕು ಎಂದು ತಿಳಿಸಿದರು.

ಪ್ರಾಧ್ಯಾಪಕ ಪ್ರೊ. ಕೆಂಪರಾಜ್ ಮಾತನಾಡಿ, ವಿದ್ಯೆ ವಿನಯ ತಂದುಕೊಡಬೇಕು. ಸಾರ್ಥಕ ಬದುಕಿಗೆ ಶಿಕ್ಷಣ ಸಾಧನವಾಗಿದೆ. ಸಾಗರದಿಂದ ನೀರನ್ನು ಹೇಗೆ ಬರಿದು ಮಾಡಲು ಸಾಧ್ಯವಿಲ್ಲವೋ ಹಾಗೆಯೇ ಕಲಿಕೆಗೂ ಕೊನೆಯಿಲ್ಲ ಎಂದರು.

# ಕ್ಷಯ ರೋಗದ ಬಗ್ಗೆ ಎಚ್ಚರ ವಹಿಸಬೇಕು: ಡಾ. ಹೆಚ್. ಅನಿಲ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕ್ಷಯ ರೋಗ ಜನರ ಆರೋಗ್ಯಕ್ಕೂ, ಸಮಾಜಕ್ಕೂ ಹಾನಿ ಮಾಡುತ್ತದೆ. ಆದ್ದರಿಂದ ಎಚ್ಚರ ವಹಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಹೆಚ್. ಅನಿಲ್ ತಿಳಿಸಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿಯಲ್ಲಿ ಏರ್ಪಡಿಸಿದ್ದ ವಿಶ್ವ ಕ್ಷಯ ರೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಜನರು ಕ್ಷಯ ರೋಗಕ್ಕೆ ಸರಿಯಾಗಿ ಚಿಕಿತ್ಸೆ ತೆಗೆದುಕೊಳ್ಳುತ್ತಿರಲಿಲ್ಲ. ಚಿಕಿತ್ಸೆ ತೆಗೆದುಕೊಳ್ಳುವವರು ಕೂಡ ಅರ್ಧದಲ್ಲಿ ನಿಲ್ಲಿಸುತ್ತಿದ್ದರು. ಆದ್ದರಿಂದ ಕ್ಷಯ ರೋಗ ನಿಯಂತ್ರಣ ಮಾಡಲು ತುಂಬಾ ಕಷ್ಟಕರ ಎಂದು ಹೇಳಿದರು.



ಕ್ಷಯ ರೋಗ ನಿಯಂತ್ರಣಕ್ಕೆ ಆಶಾ ಕಾರ್ಯಕರ್ತರು ಮತ್ತು ಆರೋಗ್ಯ ಕಾರ್ಯಕರ್ತರ ಪಾತ್ರ ತುಂಬಾ ಪ್ರಮುಖವಾಗಿದೆ. ಹೆಚ್ಚಾಗಿ ಎಲ್ಲರೂ ಕೂಡ ಹಳ್ಳಿಗಳಲ್ಲಿ ಕ್ಷಯ ರೋಗ ನಿಯಂತ್ರಣ ಪ್ರಚಾರ ಮಾಡಬೇಕು. ಕ್ಷಯ ರೋಗ ಮುಕ್ತ ಗ್ರಾಮ ಪಂಚಾಯಿತಿ ಮಾಡುವುದರ ಕಡೆಗೆ ಹೆಚ್ಚು ಗಮನ ಹರಿಸಬೇಕು ಎಂದರು.

ಕ್ಷಯ ರೋಗಿ ಇರುವ ಮನೆಯಲ್ಲಿ ತುಂಬ ಎಚ್ಚರಿಕೆಯಿಂದ ಇರಬೇಕು. ಮಕ್ಕಳ ಆರೋಗ್ಯದ ಕಡೆ ಜಾಗೃತಿ ವಹಿಸಬೇಕು. ಕ್ಷಯ ರೋಗಿಗಳು ಪ್ರಾಥಮಿಕ ಚಿಕಿತ್ಸೆ ಪಡೆಯುವುದು ಉತ್ತಮವಾದ ಮಾರ್ಗ ಎಂದು ತಿಳಿಸಿದರು.

ಐ.ಇ.ಸಿ ವಿಭಾಗದ ಮಂಜುಳ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಜಾಥಾಕ್ಕೆ ಚಾಲನೆ: ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಬಾಬು ಜಾಗೃತಿ ಜಾಥಾಗೆ ಚಾಲನೆ ನೀಡಿದರು. ಕ್ಷಯ ರೋಗ ಹೆಚ್ಚಿನದಾಗಿ ಸಕ್ಕರೆ ಕಾಯಿಲೆ ರೋಗಿಗಳ ಮೇಲೆ ಪರಿಣಾಮಗಳ ಬಗ್ಗೆ ವಿವರಿಸಿದರು.

# ಎಐ ಎಲ್ಲ ಕ್ಷೇತ್ರದಲ್ಲೂ ವ್ಯಾಪಿಸಿದೆ: ಸತ್ಯನಾರಾಯಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಿಕ್ಷಣ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಹೆಚ್ಚಾಗುತ್ತಿದ್ದು, ಕೇವಲ ತಾಂತ್ರಿಕ ವಿದ್ಯಾರ್ಥಿಗಳಿಗೆ ಅಲ್ಲದೇ ಎಲ್ಲಾ ಶೈಕ್ಷಣಿಕ ಬಳಕೆಗೆ ಕೃತಕ ಬುದ್ಧಿಮತ್ತೆ ಸಹಕಾರಿಯಾಗಿದೆ ಎಂದು ಗಂಡಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಸತ್ಯನಾರಾಯಣ ಹೇಳಿದರು.




ನಗರದ ಆರ್.ಸಿ. ರಸ್ತೆ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಂಗ್ಲ ವಿಭಾಗದ ವತಿಯಿಂದ ಬುಧವಾರ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ಕಾಲಮಾನಕ್ಕೆ ಎ.ಐ. ಬಳಕೆ ಅತ್ಯಂತ ಸೂಕ್ತವಾಗಿದ್ದು, ಪ್ರತಿಯೊಬ್ಬರೂ ಶಿಕ್ಷಕರು, ವಿದ್ಯಾರ್ಥಿಗಳಿಗೂ ಸಹಕಾರಿಯಾಗಿದೆ. ಕೃತಕ ಬುದ್ಧಿಮತ್ತೆಯು ಕಲಿಕೆ ಕೇವಲ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸೀಮಿತ ಎಂದುಕೊಂಡಿದ್ದೇವೆ, ಆದರೆ ಆ ತಪ್ಪು ಕಲ್ಪನೆಯಿಂದ ಹೊರಬೇಕು. ಆಂಗ್ಲ ಭಾಷಾ ಕಲಿಕೆಯಲ್ಲಿ ಎ.ಐ. ಪಾತ್ರ ದೊಡ್ಡದಿದ್ದು, ಇಂಗ್ಲಿಷ್ ಭಾಷೆ ಕಲಿಯದೆ ಅನೇಕರು ಉದ್ಯೋಗ ವಂಚಿತರಾಗುತ್ತಿದ್ದಾರೆ. ಅದಕ್ಕೆ ಉದಾಹರಣೆ ಎಂಬಂತೆ ಇತ್ತೀಚೆಗೆ ಹಾಸನದಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಕೆಲ ಉದ್ಯೋಗಾಂಕ್ಷಿಗಳು ಆಂಗ್ಲ ಭಾಷೆಯು ಸಂವಹನವಿಲ್ಲದೇ ಉದ್ಯೋಗ ವಂಚಿತರಿದರು. ಪ್ರಾದೇಶಿಕ ಭಾಷೆಯಲ್ಲಿ ಸಂವಹನ ನಡೆಸಿದರೂ, ಉದ್ಯೋಗಕ್ಕಾಗಿಯಾದರು ಆಂಗ್ಲ ಭಾಷೆಯನ್ನು ಕಲಿಯಬೇಕಾಗಿದೆ. ವಿದ್ಯಾರ್ಥಿಗಳ ಹಂತದಲ್ಲಿ ದಿನ ನಿತ್ಯ ಆಂಗ್ಲ ಪತ್ರಿಕೆಯನ್ನು ಓದುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು.

ದಿನ ನಿತ್ಯ ನಮಗೆ ಗೊತ್ತಿರುವ ಆಂಗ್ಲ ಪದಗಳನಾದರೂ ಬಳಸುವ ಪ್ರಯತ್ನ ಮಾಡಬೇಕು, ಹಾಗಾದಾಗ ಮಾತ್ರ ಇಂಗ್ಲೀಷ್ ಕಲಿಕೆಗೆ ಸುಲಭವಾಗಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಮಾತನಾಡಿ, ಇಂಗ್ಲೀಷ್ ಅಂತರಾಷ್ಟ್ರೀಯ ಭಾಷೆಯಾದರು ಸಹ ಎಲ್ಲಾ ಬಾಷೆಗಳನ್ನು ತನ್ನದೆ ಆದ ಹಿಡಿತದಲ್ಲಿ ಇಟ್ಟುಕೊಂಡಿದೆ. ಇತ್ತೀಚಿನ ದಿನಗಳಲ್ಲಿ ಅಷ್ಟೇ ವೇಗವಾಗಿ ತಂತ್ರಜ್ಞಾನ ಇಂಗ್ಲೀಷ್ ನಲ್ಲಿ ಅತಿ ಹೆಚ್ಚು ಪ್ರಚಲಿತದಲ್ಲಿದೆ. ಈ ತಂತ್ರಜ್ಞಾನಕ್ಕೆ ಹೊಂದಿಕೊಂಡು ಹೋಗುವ ಅನಿವಾರ್ತೆ ಇದೆ, ಇಂಗ್ಲೀಷ್ ಭಾಷೆಯನ್ನು ಗೌರವಿಸುವುದರ ಜೊತೆಗೆ ತಮ್ಮ ಮಾತೃ ಬಾಷೆಯನ್ನು ಸಹ ಪ್ರೀತಿಸುವ ಕೆಲಸವನ್ನು ಮಾಡಬೇಕು, ಸಂಭಾಷಣೆಯ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಇಂಗ್ಲೀಷ್ ಭಾಷೆಯು ಅವಶ್ಯವಾಗಿದೆ.

ಆಧುನಿಕ ತಂತ್ರಜ್ಞಾನ ಬೆಳೆದಂತೆ ಕೃತಕ ಬುದ್ದಿಮತ್ತೆ ಎಂಬ ಹೊಸ ತಂತ್ರಜ್ಞಾನ ಬೆಳೆದು ಅದರಂದ ಆಗುವ ಉಪಯೋಗಗಳು ಮತ್ತು ಇದರಿಂದ ಇಂಗ್ಲೀಷ ಸಂಭಾಷಣೆಯು ಸಹ ಉತ್ತಮವಾಗುತ್ತದೆ ಎಂದು ಹೇಳಿದರು.

ಆಂಗ್ಲ ವಿಭಾಗದ ಮುಖ್ಯಸ್ಥ ಜಿ.ಆರ್. ಮೋಹನ್ ಕುಮಾರ್, ಉಪನ್ಯಾಸಕರಾದ ಕುಶಾಲ್, ರೂಪಶ್ರೀ ಹಾಗೂ ಇತರರು ಹಾಜರಿದ್ದರು.

# ಮನೆ ನಿರ್ಮಾಣಕ್ಕೆ ತಹಶೀಲ್ದಾರ್ ವಿನಾಕಾರಣ ಅಡ್ಡಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಕಲಗೂಡು ತಾಲ್ಲೂಕು ಮಲ್ಲಿಪಟ್ಟಣ ಹೋಬಳಿ ಮದಲಾಪುರ ಗ್ರಾಮದ ಗುಂಡುತೋಪಿನಲ್ಲಿ ಮನೆ ನಿರ್ಮಾಣಕ್ಕೆ ತಹಶೀಲ್ದಾರ್ ಅಡ್ಡಿಪಡಿಸುತ್ತಿದ್ದಾರೆಂದು ಗ್ರಾಮದ ಮಂಜುನಾಥ್ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಊರಿನ ಮಂಜುನಾಥ್ ಎಂಬುವರು ಸರ್ವೆ ನಂ. 4ರಲ್ಲಿ 4 ಎಕರೆ 24 ಗುಂಟೆ ಗುಂಡುತೋಪು ಜಮೀನಿನಲ್ಲಿ ಈ ಮೊದಲಿದ್ದ ಹಳೇ ಮನೆ ಬೀಳುವ ಹಂತದಲ್ಲಿದ್ದು, ಇದೀಗ 0.1/2 ಗುಂಟೆಯಲ್ಲಿ ವಾಸ ಮಾಡಲು ಮನೆ ನಿರ್ಮಾಣ ಮಾಡುತ್ತಿದ್ದಾರೆ. ಅದಕ್ಕೆ ತಹಸೀಲ್ದಾರ್ ಕಚೇರಿಯಿಂದ ನೋಟೀಸ್ ಬಂದಿದೆ. ಆದರೆ ಅದೇ ಗುಂಡುತೋಪಿನಲ್ಲಿ ಎಂ.ಆರ್.ಲೋಕೇಶ್ ಎಂಬುವವರು ಇತ್ತೀಚೆಗೆ ವಾಸದ ಮನೆ ನಿರ್ಮಾಣ ಮಾಡಿಕೊಂಡಿದ್ದಾರೆ. ಅವರಿಗೆ ಯಾವುದೇ ತೊಂದರೆ ನೀಡಿಲ್ಲ ಎಂದು ದೂರಿದರು.

# ಇತಿಹಾಸದಲ್ಲಿ ಈ ದಿನ

## ಮಾರ್ಚ್-26

1971: ಬಾಂಗ್ಲಾದೇಶ ಸ್ವಾತಂತ್ರ್ಯ ಘೋಷಣೆ, ಪಾಕಿಸ್ತಾನದಿಂದ ಬಾಂಗ್ಲಾದೇಶ ಸ್ವಾತಂತ್ರ್ಯ ಘೋಷಿಸಿತು.

1953: ಜೋನಾಸ್ ಸಾಲ್ಕ್ ಪೋಲಿಯೋ ಲಸಿಕೆ ಘೋಷಣೆ, ಪೋಲಿಯೋ ರೋಗದ ವಿರುದ್ಧದ ಲಸಿಕೆಯನ್ನು ಜೋನಾಸ್ ಸಾಲ್ಕ್ ಘೋಷಿಸಿದರು.

1995: Schengen Agreement ಜಾರಿಗೆ ಬಂದು ಯುರೋಪಿನ ಹಲವಾರು ದೇಶಗಳ ನಡುವೆ ವೀಸಾ ರಹಿತ ಪ್ರಯಾಣ ಆರಂಭವಾಯಿತು.

**ಜನನ**

1948: ಸ್ಟೀವನ್ ಟೈಲರ್, ಅಮೇರಿಕನ್ ಗಾಯಕ

1950: ಮಾರ್ಟಿನ್ ಶಾರ್ಟ್, ಕೆನಡಾದ ಹಾಸ್ಯ ನಟ

**ಮರಣ**

1827: ಲೂಡ್ವಿಗ್ ವಾನ್ ಬೀಥೋವನ್, ಪ್ರಸಿದ್ಧ ಸಂಗೀತ ಸಂಯೋಜಕ

# ಜನಮನ ಸೂರೆಗೊಂಡ ಗ್ರಾಮೀಣ ಕಲರವ

## ಗಮನ ಸೆಳೆದ ನೀರು ಹೊರುವ, ಮಡಿಕೆ ಒಡೆಯುವ ಆಟ | ಗೋಣಿ ಚೀಲದ ಓಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಉರಿ ಬಿಸಿಲಿ ಬೇಗೆಯನ್ನು ಲೆಕ್ಕಿಸದ ವಿದ್ಯಾರ್ಥಿನಿಯರು ತಲೆ ಮತ್ತು ಸೊಂಟದ ಮೇಲೆ ನೀರು ತುಂಬಿದ ಕೊಡ ಹೊತ್ತು ಓಡಿದರೆ, ಮಡಿಕೆ ಹೊಡೆಯುವ ಆಟ, ಮತ್ತೊಂದೆಡೆ ಹಗ್ಗ-ಜಗ್ಗಾಟಕ್ಕೆ ನಿಂತು ಬಲಾಬಲ ಶಕ್ತಿ ಪ್ರದರ್ಶಿಸುವ ಮೂಲಕ ನಾವು ಎಲ್ಲದಕ್ಕೂ ಸೈ ಎಂದು ಹುಬ್ಬೇರಿಸಿದರು.

ಹೌದು...ಇದು ನಗರದ ಎಂ.ಜಿ.ರಸ್ತೆಯಲ್ಲಿನ ಮಹಿಳಾ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಣತಿ ಮಹಿಳಾ ವೇದಿಕೆ, ಹೇಮಾವತಿ ರೇಂಜರ್ಸ್ ಘಟಕ ಮತ್ತು ಐಕ್ಯೂಎಸಿ ಹಾಗೂ ಸಾಂಸ್ಕೃತಿಕ ವೇದಿಕೆ ವತಿಯಿಂದ ಬುಧವಾರ ಕಾಲೇಜಿನ ವಿದ್ಯಾರ್ಥಿನಿಯರಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಡೆದ ಗ್ರಾಮೀಣ ಕಲರವದ ರಸದೌತಣ ಉಣಬಡಿಸಿದ ಕ್ಷಣಗಳು. ಕಾರ್ಯಕ್ರಮವನ್ನು ಸಂಪನ್ಮೂಲ ವ್ಯಕ್ತಿಯಾದ ಮಹಾನಗರ ಪಾಲಿಕೆ ಅಭಿಯಂತರರಾದ ಕೆ.ಆರ್.ಕವಿತ ಅವರು ಉದ್ಘಾಟಿಸಿದರು.



ವರ್ಷಪೂರ್ತಿ ಪಾಠ ಪ್ರವಚನದಲ್ಲಿ ಮಗ್ನರಾಗಿದ್ದ ವಿದ್ಯಾರ್ಥಿನಿಯರಿಗೆ ಗ್ರಾಮೀಣ ಕ್ರೀಡೆಯಾದ ನೀರು ಹೊರುವ ಆಟ, ಮಡಿಕೆ ಹೊಡೆಯುವ ಆಟ, ಗೋಣಿಚೀಲದ ಓಟ, ಮೂರು ಕಾಲು ಓಟ, ಹಗ್ಗ-ಜಗ್ಗಾಟ, ರಂಗೋಲಿ ಸ್ಪರ್ಧೆ, ಹಾಡುಗಾರಿಕೆ ಸ್ಪರ್ಧೆ ಆಟ ನಡೆಸಲಾಯಿತು. ವಿದ್ಯಾರ್ಥಿನಿಯರು ತಲೆ ಮತ್ತು ಸೊಂಟದ ಮೇಲೆ ನೀರು ತುಂಬಿದ ಕೊಡ ಹೊತ್ತು ಸರಾಗವಾಗಿ ಓಡುತ್ತಿದ್ದರೆ ಇತ್ತ ಸ್ನೇಹಿತೆಯರ ಶಿಳ್ಳೆ ಮತ್ತು ಚಪ್ಪಾಳೆ ಹೊಡುವ ಮೂಲಕ ಪ್ರೊತ್ಸಾಹಿಸಿದರು. ಮೂರು ಕಾಲಿನ ಓಟ ನಡೆಯುತ್ತಿದ್ದಂತೆ ನೋಡುಗರ ಮೈ ಜುಮ್ಮೆನ್ನುವಂತಿತ್ತು, ಹಾಗೆಯೆ ಗೋಣಿ ಚೀಲದ ಓಟದಲ್ಲಿ ವಿದ್ಯಾರ್ಥಿನಿಯರು ಕಪ್ಪೆಗಳಂತೆ ಕುಪ್ಪಳಿಸಿ ಸಂತಸಪಟ್ಟರು.

ಇನ್ನು ಹಗ್ಗ-ಜಗ್ಗಾಟದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿಯರ ತಂಡಗಳು ತಮ್ಮ ಬಲಾಬಲವನ್ನು ಪ್ರದರ್ಶಿಸುವ ಮೂಲಕ ಕ್ರೀಡಾಕೂಟಕ್ಕೆ ಶಕ್ತಿಯನ್ನು ತುಂಬಿದರು. ಬಾಲ್ಯದ ಆಟವನ್ನು ಆಡಲು ವಿದ್ಯಾರ್ಥಿಗಳು ಸಾಲುಗಟ್ಟಿ ನಿಂತಿದ್ದು ಎಲ್ಲರ ಗಮನ ಸೆಳೆಯಿತು.

ಕ್ಯಾಂಟೀನ್ ಡೇ: ಈ ಸಂದರ್ಭದಲ್ಲಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕ್ಯಾಂಟೀನ್ ಡೇ ನಲ್ಲಿ ವಿದ್ಯಾರ್ಥಿಗಳು ಬಿರಿಯಾನಿ, ಸಮಾಲೆ ಮಜ್ಜಿಗೆ, ಮೊಳಕೆ ಕಾಳುಗಳು, ಚುರುಮುರಿ, ಪಾನಿಪುರಿ, ಬಗೆಬಗೆಯ ಹಣ್ಣುಗಳನ್ನು ಸಿದ್ದಪಡಿಸಿ ಮಾರಾಟವನ್ನು ಮಾಡಿ ತಿಂಡಿ ಪ್ರಿಯರನ್ನು ತಮ್ಮತ್ತ ಸೆಳೆದರು.

ಮಹಾನಗರ ಪಾಲಿಕೆ ಅಭಿಯಂತರರಾದ ಕೆ.ಆರ್.ಕವಿತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಆತ್ಮಶಕ್ತಿಯನ್ನು ಬಲಪಡಿಸಿಕೊಳ್ಳುವ ಮೂಲಕ ವಿದ್ಯಾರ್ಥಿಗಳು ಉದ್ಭವವಾಗುವ ಕಠಿಣ ಸಮಸ್ಯೆಯನ್ನು ಸುಲಭವಾಗಿ ಎದುರಿಸಬಹುದಾಗಿದೆ ಎಂದು ಹೇಳಿದರು.

ಸಮಾಜದಲ್ಲಿ ಸ್ವಾರ್ಥವನ್ನು ಸಮಾಜಮುಖಿಯಾಗಿ ಕೆಲಸವನ್ನು ಮಾಡಬೇಕು ಬೇರಯವರ ಬಗ್ಗೆ ಅವಲೋಕಿಸುವ ಮುನ್ನ ನಾವು ಸರಿಯಾಗಿ ಇದ್ದೇವಾ ಎಂಬುದನ್ನು ಅರಿತರೆ ಸಮಾಜದಲ್ಲಿ ಪರಿವರ್ತನೆ ತರಲು ಸಾಧ್ಯವಾಗಲಿದೆ ಎಂದರು.

ಶ್ರೀಮಂತಿಕೆ, ಆಡಂಭರಗಳಿಗೆ ಮಾರುಹೋಗದೆ ಸರಳ ಜೀವನಶೈಲಿಯನ್ನು ರೂಪಿಸಿಕೊಂಡು ಸಮಾಜಮುಖಿಯಾಗಬೇಕು. ಉತ್ತಮ ವ್ಯಕ್ತಿತ್ವಹೊಂದಿರುವಂತಹ ವ್ಯಕ್ತಿಗಳನ್ನು ಆದರ್ಶವಾಗಿ ಇಟ್ಟುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ.ಕೆ.ಜಿ.ಕವಿತ ಮಾತನಾಡಿ, ಇತ್ತೀಚೆಗೆ ಹೆಣ್ಣು ಮಕ್ಕಳ ಮೇಲೆ ಸಾಮೂಹಿಕ ಅತ್ಯಾಚಾರಗಳು, ಲೈಂಗಿಕ ಕಿರುಕುಳದಂತಹ ಪ್ರಕರಣಗಳು ಹೆಚ್ಚಾಗುವ ಮೂಲಕ ಹೆಣ್ಣು ಮಕ್ಕಳಿಗೆ ಸುರಕ್ಷತೆ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿದರು.

ಹೆಣ್ಣು ಮಕ್ಕಳು ಆತ್ಮಶಕ್ತಿಯನ್ನು ವೃದ್ಧಿಕೊಳ್ಳುವ ಮೂಲಕ ಎದುರಾಗುವಂತಹ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಬೇಕು ಎಂದು ಹೇಳಿದರು.

ಇತ್ತೀಚೆಗೆ ಯುವ ಪೀಳಿಗೆಯಲ್ಲಿ ಮೊಬೈಲ್ ವ್ಯಾಮೋಹ ಹೆಚ್ಚಾಗಿ ಗ್ರಾಮೀಣ ಕ್ರೀಡೆಗಳಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ. ಹೀಗಾಗಿ ಅವರಲ್ಲಿ ಆಸಕ್ತಿ ಹೆಚ್ಚಿಸುವ ಸಲುವಾಗಿ ಈಗ್ರಾಮೀಣ ಕ್ರೀಡೆಟಿ ಹಾಗೂ ಈಕ್ಯಾಂಟಿನ್ ಡೇಟಿ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಕಾಲೇಜಿನಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ವಿದ್ಯಾರ್ಥಿಗಳು ಪ್ರತಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಮೂಲಕ ಗ್ರಾಮೀಣ ಕಲರವಕ್ಕೆ ಮೆರಗು ತರಬೇಕು ಎಂದರು.

ಗ್ರಾಮೀಣ ಕಲರವದಲ್ಲಿ ಪ್ರಣತಿ ಮಹಿಳಾ ವೇದಿಕೆ ಸಂಚಾಲಕಿ ಡಾ. ಶ್ರೀದೇವಿ.ಎಂ.ಜೆ, ಹೇಮಾವತಿ ರೇಂಜರ್ಸ್ ಘಟಕ ಸಂಚಾಲಕಿ ಲತಾ.ಜಿ.ಎಂ, ಸಾಂಸ್ಕೃತಿಕ ವೇದಿಕೆ ಸಂಚಾಲಕ ಪುರುಷೋತ್ತಮ್.ವಿ ಹಾಗೂ ಕಾಲೇಜಿನ ಎಲ್ಲಾ ವಿಭಾಗದ ಪ್ರಾಧ್ಯಾಪಕರು, ಬೋಧಕೇತರ ವರ್ಗ ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿ ಯಶಸ್ವಿಗೊಳಿಸಿದರು.


# ಕೈಗಾರಿಕಾಭಿವೃದ್ಧಿಗೆ ಮೀಸಲಿಟ್ಟ ಭೂಮಿ ಅನ್ಯ ಉದ್ದೇಶಕ್ಕೆ ಬೇಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೈಗಾರಿಕೆ ಹಾಗೂ ವಾಣಿಜ್ಯ ಉದ್ದೇಶಗಳಿಗಾಗಿ ಸ್ವಾಧೀನ ಮಾಡಿ 30 ವರ್ಷ ಕಳೆದಿದ್ದರೂ ಭೂಮಿಯನ್ನು ಉದ್ದೇಶಿತ ಯೋಜನೆಗೆ ಬಳಸಿಲ್ಲ ಎಂದು ಆರೋಪಿಸಿ ತಾಲ್ಲೂಕಿನ ಚಿಕ್ಕಬಸವನಹಳ್ಳಿ ರೈತರು ಬುಧವಾರ ಪ್ರತಿಭಟನೆ ನಡೆಸಿದರು.

ಭೂಮಿ ಕಳೆದುಕೊಂಡ ಬಡ ರೈತರು ಈಗ ಬರಿಗೈ ಆಗಿದ್ದೇವೆ. ಹಾಗಾಗಿ ನಮ್ಮ ಭೂಮಿಯನ್ನು ನಮಗೆ ವಾಪಸ್ ಕೊಡಿ ಇಲ್ಲವೇ ಈಗಿನ ಮಾರುಕಟ್ಟೆ ದರದ ಅನ್ವಯ ಹೆಚ್ಚಿನ ಪರಿಹಾರ ಕೊಡಿ ಎಂದು ಆಗ್ರಹಿಸಿದರು.

ಈ ವರೆಗೂ ಅಂದರೆ 30 ವರ್ಷಗಳಿಂದ ಯಾವುದೇ ಕಾಮಗಾರಿ ಮಾಡದೆ ಸುಮ್ಮನಿದ್ದವರು, ಇದೀಗ ಕಾಮಗಾರಿ ಮಾಡಲು ಬಂದಿದ್ದರಿಂದ ಆಕ್ರೋಶಗೊಂಡ ರೈತರು ವಾಹನ ತಡೆದು ಪ್ರತಿಭಟನೆ ನಡೆಸಿದರು.



ಇದೇ ವೇಳೆ ಗ್ರಾಮದ ಸಾರ್ವಜನಿಕ ಉದ್ದೇಶ ಹಾಗೂ ಭೂಮಿ ಕಳೆದು ಕೊಂಡ ರೈತರಿಗೆ ನಿವೇಶನಕ್ಕಾಗಿ ಭೂಮಿ ಮೀಸಲಿಡುವಂತೆ ಒತ್ತಾಯ ಮಾಡಿದ ಪ್ರತಿಭಟನಾಕಾರರು, 30 ವರ್ಷದಿಂದ 68 ಎಕರೆ ಭೂಮಿಯಲ್ಲಿ ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇವೆ. ಈ ನಡುವೆ ದಿಢೀರನೆ ಭೂಮಿ ಸ್ವಾಧೀನಕ್ಕೆ ಬಂದಿದ್ದ ಕೆಐಎಡಿಬಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನೀವು 30 ವರ್ಷಗಳ ಹಿಂದೆ ಕೊಟ್ಟ ಪರಿಹಾರದ ದುಪ್ಪಟ್ಟು ಮೊತ್ತವನ್ನು ಈಗ ವಾಪಸ್ ಕೊಡ್ತೀವಿ ನಮ್ಮ ಭೂಮಿ ನಮಗೆ ಕೊಡಿ ಎಂದು ಆಗ್ರಹಿಸಿದರು.

ಈ ಸಂಬಂಧ ಸರ್ಕಾರಕ್ಕೆ ಕೈ ಮುಗಿದು ಮನವಿ ಮಾಡಿದ ರೈತರು ಹಾಗೂ ಮಹಿಳೆಯರು, ಹೆಚ್ಚು ಪರಿಹಾರ ಕೊಡಿ, ಇಲ್ಲ ಭೂಮಿ ಬಿಟ್ಟುಕೊಡಿ ಎಂದು ಮನವಿ ಮಾಡಿದರು.

ಈ ವೇಳೆ ಶ್ರೀನಿವಾಸ್, ವಿಶ್ವನಾಥ್, ಭಾಗ್ಯಮ್ಮ, ಜಯಮ್ಮ, ಸುಶೀಲಮ್ಮ, ನಂಜೇಗೌಡ, ಮಂಜೇಗೌಡ ಇತರರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248